## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಶ್ರೀ ಹೆಚ್.ವೆಂಕಟಾಚಲಯ್ಯ, ದ್ವಿ.ದ.ಸ., ಯಲಹಂಕ ತಾಲ್ಲೂಕು ಪಂಚಾಯಿತಿ ಕಛೇರಿ, ಬೆಂಗಳೂರು ಇವರ ವಿರುದ್ಧ ಮಾನ್ಯ ಲೋಕಾಯುಕ್ತ ಪ್ರಕರಣದ ಕುರಿತು ಅಂತಿಮ ಆದೇಶ.

ಓದಲಾಗಿದೆ :-1) ಅಪರ ನಿಬಂಧಕರು, ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಇವರ ಅ.ಸ.ಪತ್ರ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿ.ಸಿ.ಡಿ-512/2009/ಎಆರ್‌ಇ-10, ದಿನಾಂಕ : 16.08.2011.

2) ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 238 ಕೆಎಸ್‌ಎಸ್ 2011, ದಿನಾಂಕ: 16.09.2011.

3) ಮಾನ್ಯ ಲೋಕಾಯುಕ್ತರ ವಿಚಾರಣಾ ವರದಿ - ಶಿಫಾರಸ್ಸು ಪತ್ರ ಸಂಖ್ಯೆ: ಲೋಕ್/ಐಎನ್‌ಕ್ಯೂ/ 14-ಎ/299 / 2011/ಎಆರ್‌ಇ-3, ದಿನಾಂಕ : 04.10.2017.

4) ಶ್ರೀ ಹೆಚ್.ವೆಂಕಟಾಚಲಯ್ಯ, ದ್ವಿ.ದ.ಸ., ಇವರಿಗೆ ನೀಡಲಾದ 2ನೇ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ 395 ಕೆಎಸ್‌ಎಸ್ 2017, ದಿ:13.11.2017

5)ಶ್ರೀ ಹೆಚ್. ವೆಂಕಟಾಚಲಯ್ಯ, ದ್ವಿ.ದ.ಸ. ಇವರ ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ:06.12.2017.

*******

ಪ್ರಸ್ತಾವನೆ :-

ಅಪರ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಮೇಲೆ ಓದಲಾದ ಕ್ರಮಾಂಕ(1)ರ ದಿನಾಂಕ:16.08.2011ರಂದು ಸಲ್ಲಿಸಿದ ಪ್ರಸ್ತಾವನೆಯೊಂದಿಗೆ ಮಾನ್ಯ ಉಪ ಲೋಕಾಯುಕ್ತರವರು, ಕರ್ನಾಟಕ ಲೋಕಾಯುಕ್ತ ಅಧಿನಿಯಮ ಸೆಕ್ಷನ್ 12(3)ರಡಿಯಲ್ಲಿ ಸಲ್ಲಿಸಿರುವ ವರದಿಯನ್ನು ಸಲ್ಲಿಸಿ, ಶ್ರೀ ವೆಂಕಟಾಚಲಯ್ಯ, ದ್ವಿತೀಯ ದರ್ಜೆ ಸಹಾಯಕ ಇವರು ತಾಲ್ಲೂಕು ಪಂಚಾಯಿತಿ ಯಲಹಂಕ, ಬೆಂಗಳೂರು ಉತ್ತರ ಇಲ್ಲಿ 2007-08ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಶ್ರೀಮತಿ ನಾಗರತ್ನ ಬಿನ್ ಕೆಂಪರಸಪ್ಪ, ಗಾಯಿತ್ರಿನಗರ, ಬೆಂಗಳೂರು ಇವರಿಗೆ ಇವರ ತಂದೆಯ ಹೆಸರಿನಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ಸಾಣೆಗೊಂಡನಹಳ್ಳಿಯಲ್ಲಿ 1977ನೇ ಸಾಲಿನಲ್ಲಿ ಮಂಜೂರಾಗಿದ್ದ ಉಚಿತ ನಿವೇಶನ ಸಂಖ್ಯೆ: 891ರ ನಿವೇಶನದ ಹಕ್ಕುಪತ್ರದ ನಕಲು ಪ್ರತಿಯನ್ನು (Duplicate Copy)ನೀಡುವ ಸಂಬಂಧ ಅಕ್ರಮ ಸಂಭಾವನೆ ನೀಡಲು ಒತ್ತಾಯಿಸಿದ್ದು, ದಿನಾಂಕ:27.03.2008ರಂದು ಲಂಚದ ಹಣ ಪಡೆದುಕೊಳ್ಳುವಾಗ ಟ್ರ್ಯಾಪ್ ಆಗಿರುವುದನ್ನು ಅನುಸರಿಸಿ ಸದರಿಯವರು ಎಸಗಿರುವ ದುರ್ನಡತೆಯ ಸಂಬಂಧದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 14-ಎ ರನ್ವ ಯ ಇಲಾಖಾ ವಿಚಾರಣೆ ನಡೆಸಲು ಪ್ರಕರಣ ವನ್ನು ಉಪ ಲೋಕಾಯುಕ್ತರಿಗೆ ವಹಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದರು.

ಅಪರ ನಿಬಂಧಕರು ಕರ್ನಾಟಕ ಲೋಕಾಯುಕ್ತರವರು ಸಲ್ಲಿಸಿದ ಶಿಫಾರಸ್ಸಿನ ಮೇರೆಗೆ ಮೇಲೆ ಓದಲಾದ ಕ್ರಮಾಂಕ(2) ರ ದಿನಾಂಕ: 16.09.2011ರ ಸರ್ಕಾರದ ಆದೇಶದಲ್ಲಿ ಶ್ರೀ ವೆಂಕಟಾಚಲಯ್ಯ, ಹೆಚ್. ದ್ವಿ.ದ.ಸ., ಇವರು ಎಸಗಿರುವ ದುರ್ನಡತೆ ವಿರುದ್ಧದ ಆಪಾದನೆಗಳ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 15(2ಎ) ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಹಾಗೂ ಸದರಿ ನಿಯಮ 11ರ ವಿಧಿವಿಧಾನಗಳನ್ನು ಅನುಸರಿಸಿ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ರ ಅಡಿಯಲ್ಲಿ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ರವರಿಗೆ ವಹಿಸಲಾಗಿದೆ.

ಮಾನ್ಯ ಉಪ ಲೋಕಾಯುಕ್ತರು ಮೇಲೆ ಓದಲಾದ ಕ್ರಮಾಂಕ(3)ರ ದಿನಾಂಕ: 04.10.2017ರಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿ ಆಪಾದಿತ ನೌಕರರ ಮೇಲಿನ ಆರೋಪಗಳು ಸಾಬೀತಾಗಿದ್ದು, ಸದರಿ ನೌಕರರು ದಿನಾಂಕ:30.04.2015 ರಂದು ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಶ್ರೀಯುತ ನಿವೃತ್ತಿ ವೇತನದಲ್ಲಿ ಶೇಕಡ 50ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಆಪಾದಿತ ನೌಕರರಿಗೆ ಜಾರಿ ಮಾಡಿದ ಮೇಲೆ ಓದಲಾದ ಕ್ರಮಾಂಕ (4)ರ ದಿ:13.11.2017ರ 2ನೇ ಕಾರಣ ಕೇಳುವ ನೋಟೀಸ್‌ನೊಂದಿಗೆ ಮಾನ್ಯ ಉಪ ಲೋಕಾಯುಕ್ತರ ದಿನಾಂಕ:04.10.2017ರ ಶಿಫಾರಸ್ಸು ಪತ್ರ ಮತ್ತು ದಿನಾಂಕ:28.09.2017ರ ವಿಚಾರಣಾ ವರದಿಯ ಪ್ರತಿಗಳನ್ನು ಸದರಿಯವರಿಗೆ ಲಿಖಿತ ಹೇಳಿಕೆಯನ್ನು 15 ದಿನಗಳೊಳಗಾಗಿ ಸಲ್ಲಿಸುವಂತೆ ಸೂಚಿಸಲಾಗಿತ್ತು.

ಶ್ರೀ ಹೆಚ್.ವೆಂಕಟಾಚಲಯ್ಯ, ಆಪಾದಿತ ನೌಕರರು ಮೇಲೆ ಓದಲಾದ ಕ್ರಮಾಂಕ(5) ದಿನಾಂಕ:06.12.2017 ರಂದು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಲೋಕಾಯುಕ್ತ ವಿಚಾರಣಾಧಿಕಾರಿಗಳು ದಿನಾಂಕ:28.09.2017 ರಂದು ಸಲ್ಲಿಸಿರುವ ವಿಚಾರಣಾ ವರದಿಯು ಸತ್ಯಾಂಶದಿಂದ ಕೂಡಿರುವುದಿಲ್ಲ. ಸದರಿ ವರದಿಯು ಊಹೆಯಿಂದ ಕೂಡಿದ್ದು, ಸಾಕ್ಷಿದಾರರನ್ನು ಮತ್ತು ದಾಖಲೆಗಳನ್ನು ಸಮರ್ಪಕವಾಗಿ ಪರಿಶೀಲಿಸದೇ ಅಂತಿಮ ತೀರ್ಮಾನಕ್ಕೆ ಬಂದು ವರದಿ ಸಲ್ಲಿಸಿರುವುದಾಗಿ, ಅದರ ಆಧಾರದ ಮೇಲೆ ಮಾನ್ಯ ಉಪ ಲೋಕಾಯುಕ್ತರವರು ತಮ್ಮ ಶಿಫಾರಸ್ಸು ಮಾಡಿರುವುದಾಗಿ, ತಾವು ಸರ್ಕಾರಿ ಸೇವಾವಧಿಯಲ್ಲಿ ಪ್ರಾಮಾಣಿಕರಾಗಿ ಕರ್ತವ್ಯನಿರ್ವಹಿಸಿದ್ದು, ಯಾವುದೇ ಕಪ್ಪುಚುಕ್ಕೆಗೆ ಅವಕಾಶವಿಲ್ಲದಂತೆ ಕರ್ತವ್ಯನಿರ್ವಹಿಸಿ ಸೇವೆಯಿಂದ ನಿವೃತ್ತಿ ಹೊಂದಿರುವುದಾಗಿ, ವಿಚಾರಣಾಧಿಕಾರಿಗಳು ತಮ್ಮ ಮೇಲೆ ಮಾಡಲಾಗಿರುವ ಎಲ್ಲಾ ಆರೋಪಗಳ ವರದಿಗಳನ್ನು ಅಲ್ಲಗಳೆಯುತ್ತಾ, ತಮ್ಮನ್ನು ಆರೋಪಮುಕ್ತರನ್ನಾಗಿ ಮಾಡಬೇಕೆಂದು ಕೋರಿರುತ್ತಾರೆ. ಆದರೆ, ಆರೋಪಿತ ನೌಕರರು ತಮ್ಮ ಲಿಖಿತ ಹೇಳಿಕೆಯಲ್ಲಿ ತಮ್ಮ ಮೇಲಿನ ಆರೋಪಗಳನ್ನು ನಿರಾಕರಿಸಲು ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ.

ಶ್ರೀ ಹೆಚ್.ವೆಂಕಟಾಚಲಯ್ಯ, ನಿವೃತ್ತ ದ್ವಿತೀಯ ದರ್ಜೆ ಸಹಾಯಕರು, ಯಲಹಂಕ ತಾಲ್ಲೂಕು ಪಂಚಾಯಿತಿ ಕಛೇರಿ, ಬೆಂಗಳೂರು ಉತ್ತರ ತಾಲ್ಲೂಕು ಇವರು 2007-08ನೇ ಸಾಲಿನಲ್ಲಿ ಕರ್ತವ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಸದರಿಯವರ ಮೇಲೆ ನಡೆದ ಲೋಕಾಯುಕ್ತ ಟ್ರ್ಯಾಪ್ ಪ್ರಕರಣದಲ್ಲಿ ಆರೋಪಿತ ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ರವರಿಗೆ ವಹಿಸಿದ ಹಿನ್ನೆಲೆಯಲ್ಲಿ ಮಾನ್ಯ ಉಪಲೋಕಾಯುಕ್ತರು ಸಲ್ಲಿಸಿದ ವಿಚಾರಣಾ ವರದಿ ಹಾಗೂ ಶಿಫಾರಸ್ಸಿನ ಮೇರೆಗೆ ಆಪಾದಿತ ನೌಕರರ ಮೇಲೆ ಮಾಡಲಾದ ಆರೋಪಗಳು ಸಾಬೀತಾಗಿದ್ದು, ಸದರಿ ನೌಕರರು ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಶ್ರೀಯುತರ ನಿವೃತ್ತಿ ವೇತನದ ಶೇಕಡ 50ರಷ್ಟು ಶಾಶ್ವತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದರಿಂದ, ಹಾಗೂ ಆಪಾದಿತ ನೌಕರರು ತಮ್ಮ ಲಿಖಿತ ಹೇಳಿಕೆಯಲ್ಲಿ ಮಾನ್ಯ ಉಪಲೋಕಾಯುಕ್ತರ ವಿಚಾರಣಾ ವರದಿಯನ್ನು ಅಲ್ಲಗಳೆದು, ತಮ್ಮನ್ನು ಆರೋಪಮುಕ್ತರನ್ನಾಗಿ ಮಾಡಬೇಕೆಂದು ಕೋರಿದ್ದಾಗ್ಯೂ, ಆರೋಪಿತ ನೌಕರರು ತಮ್ಮ ಲಿಖಿತ ಹೇಳಿಕೆಯಲ್ಲಿ ತಮ್ಮ ಮೇಲಿನ ಆರೋಪಗಳನ್ನು ನಿರಾಕರಿಸಲು ಯಾವುದೇ ದಾಖಲಾತಿಗಳನ್ನು ಸಲ್ಲಿಸಿಲ್ಲದಿರುವುದರಿಂದ, ಹಾಗೂ ಸದರಿಯವರ ಲಿಖಿತ ಹೇಳಿಕೆಗಳಲ್ಲಿ ಪರಿಗಣನಾರ್ಹವಾದಂತಹ ಯಾವುದೇ ಅಂಶಗಳು ಕಂಡುಬಾರದಿರುವ ಕಾರಣದಿಂದಾಗಿ ಮಾನ್ಯ ಉಪ ಲೋಕಾಯುಕ್ತರು ಶಿಫಾರಸ್ಸು ಮಾಡಿರುವಂತೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು, 1957ರ ನಿಯಮ 214 (1) (ಎ) ರನ್ವಯ ಶ್ರೀ ವೆಂಕಟಾಚಲಯ್ಯ, ನಿವೃತ್ತ ದ್ವಿತೀಯ ದರ್ಜೆ ಸಹಾಯಕರು, ಯಲಹಂಕ ತಾಲ್ಲೂಕು ಪಂಚಾಯಿತಿ, ಬೆಂಗಳೂರು ಉತ್ತರ ಇವರ ನಿವೃತ್ತ ವೇತನದ ಶೇಕಡ 50ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 395 ಕೆಎಸ್ ಎಸ್ 2017</u>

<u>ಬೆಂಗಳೂರು, ದಿನಾಂಕ: 10.04.2018</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಹೆಚ್. ವೆಂಕಟಾಚಲಯ್ಯ, ನಿವೃತ್ತ ದ್ವಿತೀಯ ದರ್ಜೆ ಸಹಾಯಕರು, ಯಲಹಂಕ ತಾಲ್ಲೂಕು ಪಂಚಾಯಿತಿ, ಬೆಂಗಳೂರು ಉತ್ತರ ಇವರ ಕರ್ತವ್ಯದ ಅವಧಿಯಲ್ಲಿ ನಡೆಸಲಾದ ಲೋಕಾಯುಕ್ತ ಟ್ರ್ಯಾಪ್ ಪ್ರಕರಣದಲ್ಲಿ ನಡೆಸಲಾದ ಇಲಾಖಾ ವಿಚಾರಣೆಯಲ್ಲಿ ಸದರಿಯವರ ವಿರುದ್ಧ ಮಾಡಲಾದ ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ಸದರಿ ನೌಕರರು

ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಕರ್ನಾಟಕ ನಾಗರೀಕ ಸೇವಾ ನಿಯಮಾವಳಗಳು, ನಿಯಮ 214 (1) (ಎ)ರನ್ವಯ ಶ್ರೀ ಹೆಚ್. ವೆಂಕಟಾಚಲಯ್ಯ, ನಿವೃತ್ತ ದ್ವಿತೀಯ ದರ್ಜೆ ಸಹಾಯಕ ಇವರ ನಿವೃತ್ತಿ ವೇತನದ ಶೇಕಡ 50ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

10/4/18

(ಡಿ.ಹೆಚ್.ವಿಜಯ್)
ಸರ್ಕಾರದ ಅಧೀನ ಕಾರ್ಯದರ್ಶಿ
(ಸೇವೆಗಳು ಬಿ ಮತ್ತು ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

10/12/2018

ಇವರಿಗೆ :-

1) ಮಹಾಲೇಖಪಾಲರು, (ಅ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ
3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಬೆಂಗಳೂರು ಉತ್ತರ, ಯಲಹಂಕ
4) ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು - ಪತ್ರ ಸಂಖ್ಯೆ: ಲೋಕ್/ಐಎನ್‌ಕ್ಯೂ/ 14-ಎ/299 / 2011/ಎಆರ್‌ಇ-3, ದಿನಾಂಕ : 04.10.2017ನ್ನು ಉಲ್ಲೇಖಿಸಿದೆ.
5) ಮಾನ್ಯ ಉಪ ಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು- ಲೋಕ್/ಐಎನ್‌ಕ್ಯೂ/ 14-ಎ/299 / 2011/ಎಆರ್‌ಇ-3, ದಿನಾಂಕ : 04.10.2017ನ್ನು ಉಲ್ಲೇಖಿಸಿದೆ.
6) ಶ್ರೀ ಹೆಚ್. ವೆಂಕಟಾಚಲಯ್ಯ, ನಿವೃತ್ತ ದ್ವಿತೀಯ ದರ್ಜೆ ಸಹಾಯಕರು, ತಾಲ್ಲೂಕು ಪಂಚಾಯಿತಿ ಯಲಹಂಕ, ಬೆಂಗಳೂರು ಉತ್ತರ.
7) ಶ್ರೀ ಹೆಚ್.ವೆಂಕಟಾಚಲಯ್ಯ, ಬಿನ್ ಹನುಮಯ್ಯ, ನಿವೃತ್ತ ದ್ವಿ.ದ.ಸ., ನರಸೀಪುರ, ಮತ್ತಹಳ್ಳಿ ಅಂಚೆ, ದಾಸರಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು. ಬೆಂಗಳೂರು ಜಿಲ್ಲೆ.

(6 ಮತ್ತು 7: **ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಬೆಂಗಳೂರು ಉತ್ತರ ಇವರ ಮೂಲಕ**)

8) ಸರ್ಕಾರದ ಪ್ರಧಾನ ಕಾರ್ಯದರ್ಶಿ / ಸರ್ಕಾರದ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿರವರು.
9) ಸರ್ಕಾರದ ಜಂಟಿ ಕಾರ್ಯದರ್ಶಿ (ಆಡಳಿತ-2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಸಹಾಯಕರು.
10) ಮೇಲ್ವಿಚಾರಕರು, ಗಣಕಯಂತ್ರ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
11) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.